**Witness duly sworn on 24.03.2026**

**Chief Examination by Advocate for Appellant :**

Today I have filed my affidavit in lieu of my examination in chief and its contents are true and correct.

## Cross examination by respondent counsel:

ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನಾನು ನನ್ನ ಅಪೀಲಿನ ಮೇಲಿರುವ ಸಹಿ ನನ್ನ ಸಹಿ ಇರುವುದಿಲ್ಲ. ನಾನು ಈಗ ನೋಡುತ್ತಿರುವ ಮಧ್ಯಂತರ ಅರ್ಜಿ ಕಲಂ 5 ಕಾಲ ಪರಿಮಿತಿ ಅಧಿನಿಯಮ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನ ಸಹಿ ಇರುವುದಿಲ್ಲ. ನಾನು ಈಗ ನೋಡುತ್ತಿರುವ ವಕಾಲತ್ ನಲ್ಲಿ ಇರುವಂತಹ ಸಹಿ ನನ್ನ ಸಹಿಯೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಜ್ಞಾಪಕದಲ್ಲಿ ಇರುವುದಿಲ್ಲ. ನಾನು ಈ ದಿನ ನನ್ನ ಮುಖ್ಯ ವಿಚಾರಣೆ ಅಂತ ಹೇಳಿ ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಇರುವ ಸಹಿ ಇಂಗ್ಲೀಷ್ ನಲ್ಲಿ ಇದ್ದು ಅದು ನನ್ನ ಸಹಿ ಇರುತ್ತದೆ. ನನಗೆ ಇಂಗ್ಲೀಷ್ ನಲ್ಲಿ ಸಹಿ ಮಾಡಲು ಮಾತ್ರ ಬರುತ್ತದೆ ಓದಲು ಮತ್ತು ಬರೆಯಲು ಬರುವುದಿಲ್ಲ.

ಲಲಿತಾದ್ರಿಪುರ ಗ್ರಾಮದ ಸರ್ವೆ ನಂಬರ್ 2 ವಿಸ್ತೀರ್ಣ 1 ಎಕರೆ 17 ಗುಂಟೆ ಜಮೀನು ನಮ್ಮ ಜಮೀನು ಎಂದರೆ ಸರಿ. ಸದರಿ ಜಮೀನನ್ನು ಮೂಡಾ ದವರು 1997 ನೇ ಇಸವಿಯಲ್ಲಿ notification ಮಾಡಿ ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಮೂಡಾ ದವರು ನಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡ ಮೇಲೆ ನಮಗೆ ಪರಿಹಾರ ಬರಬೇಕು ಎನ್ನುವ ಬಗ್ಗೆ ಮಾಹಿತಿ ಇರುತ್ತದೆ. ಈ ಹಿಂದೆ ಸಲ್ಲಿಸಿದ್ದ LAC ಕೇಸಿನಲ್ಲಿ ಎಕರೆಗೆ 17,67,767/- ರೂಪಾಯಿ ಪರಿಹಾರದ ಆದೇಶ ಆಗಿತ್ತು ಎಂದರೆ ಸರಿ. ಆ ಆದೇಶವನ್ನು ನ್ಯಾಯಾಲಯವು ದಿನಾಂಕ 01.02.2019 ರಂದು ಮಾಡಿತ್ತು ಎಂದರೆ ಸರಿ. ನಾನು ಆ ಆದೇಶ ಆದ ಮೇಲೆ ಅಮಲ್ಜಾರಿ ಅರ್ಜಿ ನಂಬರ್ 299/22 ನಂತೆ ಮೈಸೂರಿನ ಒಂದನೇ ಸಿವಿಲ್ ಜಡ್ಜ್ ಹಿರಿಯ ನ್ಯಾಯಾಲಯದಲ್ಲಿ ಸಲ್ಲಿಸಿದ್ದೆ ಎಂದರೆ ಸರಿ.

( ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶವನ್ನು ಕೋರಿದ್ದು ಕಾಲವಕಾಶವನ್ನು ನೀಡಿ ಪಾಟೀ ಸವಾಲಿಗೆ ಮುಂದೂಡಲಾಯಿತು.)

**TYPED TO MY DICTATION IN THE OPEN COURT.**

***R. O. I. & A. C.,***

***IV ADJ.,***
***MYSORE.***